# ಅಮಿತಾಭ್ ಹೆಗ್ಗಳಿಕೆ

ಕೊರೊನಾ ವೈರಸ್‌ನ ಹಾವಳಿ ಹೆಚ್ಚುತ್ತಲೇ ಇದೆ. ಕಾದು ಸುಸ್ತಾದ ಬಾಲಿವುಡ್ ತಾರೆಯರು ಒಬ್ಬೊಬ್ಬರಾಗಿ ಎಚ್ಚರಿಕೆಯಿಂದ ಸಿನಿಮಾ ಶೂಟಿಂಗ್‌ನಲ್ಲಿ ಭಾಗವಹಿಸುತ್ತಿದ್ದಾರೆ. ಬಾಲಿವುಡ್‌ನ ಸೂಪರ್‌ಸ್ಟಾರ್ ಕೂಡಾ ಶೂಟಿಂಗ್ ಶುರು ಮಾಡಿದ್ದಾರೆ. ಆದರೆ ಬೆಳ್ಳಿತೆರೆಯ ಸಿನಿಮಾಗಳದ್ದಲ್ಲ; ಟಿವಿ ರಿಯಾಲಿಟಿ ಶೋ ಕೌನ್ ಬನೇಗಾ ಕರೋಡ್‌ಪತಿಯದ್ದು. ಶೂಟಿಂಗ್ ಸಮಯದಲ್ಲಿ ಅತ್ಯಂತ ಕಡಿಮೆ ಸಿಬ್ಬಂದಿ, ಎಲ್ಲರೂ ಪಿಪಿಇ ಕಿಟ್ ಧರಿಸಿದ್ದು, ಗರಿಷ್ಠ ಮುಂಜಾಗ್ರತೆಗಳ ಬಗ್ಗೆ ಅಮಿತಾಭ್ ತಮ್ಮ ಬ್ಲಾಗ್‌ನಲ್ಲಿ ಅನುಭವಗಳನ್ನು ಬರೆದುಕೊಂಡಿದ್ದಾರೆ. ಸೋನಿ ಟೀವಿ ಸಲುವಾಗಿ ಅಮಿತಾಭ್ ಈಗ ನಡೆಸಿಕೊಡುತ್ತಿರುವುದು ಕೌನ್ ಬನೇಗಾ ಕರೋಡ್‌ಪತಿಯ ಹನ್ನೆರಡನೇ ಸೀಸನ್. ಒಂದು ಸೀಸನ್ ಸಲುವಾಗಿ ಅಮಿತಾಭ್ 350 ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಿದ್ದಾರೆ ಎಂದು ಹಿಂದೆಯೇ ಸುದ್ದಿಯಾಗಿತ್ತು.

77ರ ಹರೆಯದ ಅಮಿತಾಭ್ ಈಗಲೂ ಬಾಲಿವುಡ್‌ನಲ್ಲಿ ಬೇಡಿಕೆ ಇರುವ ನಟ. ವಯಸ್ಸಾದ ಬಳಿಕ ತೆರೆಯ ಮೇಲಿನ ಹಳೆಯ ಇಮೇಜ್‌ಗೆ ಕಟ್ಟುಬೀಳದೆ ಅತ್ಯಂತ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸುತ್ತಿರುವುದು ಅಮಿತಾಭ್ ಹೆಗ್ಗಳಿಕೆ. ಕೊರೊನಾ ಹಾವಳಿಯ ಮಧ್ಯೆಯೇ ಓಟಿಟಿ ಯಲ್ಲಿ ಬಿಡುಗಡೆಯಾದ ಅವರ ಚಿತ್ರ 'ಗುಲಾಬೊ ಸಿತಾಬೊ' ನೋಡಿದವರಿಗೆ ಇದು ಅರ್ಥವಾಗುತ್ತದೆ.

ಸದ್ಯಕ್ಕೆ ಹಲವು ಜನಪ್ರಿಯ ಶೈಲಿಯ ಚಿತ್ರಗಳ ಮಧ್ಯೆ ಅಮಿತಾಭ್ ಖ್ಯಾತ ನಿರ್ದೇಶಕ ನಾಗರಾಜ ಮಂಜುಳೆ ಅವರ 'ಜುಂಡ್' ಚಿತ್ರದಲ್ಲೂ ನಟಿಸಿದ್ದಾರೆ. ಎಲ್ಲ ಸರಿ ಇದ್ದಿದ್ದರೆ ಈ ಚಿತ್ರ ಮೇನಲ್ಲಿ ಬಿಡುಗಡೆ ಆಗಬೇಕಿತ್ತು. ಫುಟ್‌ಬಾಲ್ ಕೋಚ್ ವಿಜಯ್ ಬರ್ಸೆ ಜೀವನ ಆಧಾರಿತ ಚಿತ್ರವಿದು. 'ಸ್ಲಮ್ ಸಾಕರ್ ಫೌಂಡೇಷನ್' ಎಂಬ ಎನ್‌ಜಿಓ ಕಟ್ಟಿಕೊಂಡು ಕೊಳೆಗೇರಿ ಮಕ್ಕಳಿಗೆ ಫುಟ್‌ಬಾಲ್ ಕಲಿಸಿದ ಬರ್ಸೆಯ ಈ ಜೀವನ ಕಥನವನ್ನು 'ಟಿ ಸಿರೀಸ್' ನಿರ್ಮಿಸಿದೆ. ಮಂಜುಳೆ ಇದರ ನಿರ್ಮಾಪಕರಲ್ಲೂ ಒಬ್ಬರು. ಬಾಕ್ಸಾಫೀಸ್‌ನಲ್ಲಿ ಸೂಪರ್‌ಹಿಟ್ ಆದ 'ಸಾಯ್‌ರಟ್' ಚಿತ್ರದ ನಟ ನಟಿಯರನ್ನೇ ಈ ಚಿತ್ರದಲ್ಲೂ ಮಂಜುಳೆ ಹಾಕಿಕೊಂಡಿರುವುದು ಪ್ರೇಕ್ಷಕರ ನಿರೀಕ್ಷೆಯನ್ನು ಹೆಚ್ಚಿಸಿದೆ.

ಈ ಚಿತ್ರವನ್ನು ಓಟಿಟಿ ಮೂಲಕ ಬಿಡುಗಡೆ ಮಾಡುವ ಯತ್ನಕ್ಕೆ ರಂಗಾ ರೆಡ್ಡಿ ಜಿಲ್ಲಾ ನ್ಯಾಯಾಲಯ ತಡೆಯೊಡ್ಡಿದ್ದು ಸುದ್ದಿಯಾಗಿತ್ತು. ಮಂಜುಳೆ ವಿರುದ್ಧ ಕಾಪಿರೈಟ್ ಉಲ್ಲಂಘನೆಯ ಕೇಸ್ ಹಾಕಲಾಗಿದೆ. ತಡೆಯಾಜ್ಞೆ ತೆರವಾಗುವ ಸುದ್ದಿಯನ್ನು ಚಿತ್ರಪ್ರೇಮಿಗಳು ಕಾಯುತ್ತಿದ್ದಾರೆ.

■ ಬಿಂದು





# ರಜನಿಯ ಆತಂಕ

ದಕ್ಷಿಣದ ಸೂಪರ್‌ಸ್ಟಾರ್ ರಜನಿಕಾಂತ್ ಅಭಿನಯದ 'ಅಣ್ಣಾತೆ' ಚಿತ್ರತಂಡ, ಕೊರೊನಾ ಸಂಕಟದಿಂದ ಹೊರಬಂದಿದ್ದು, ಶೂಟಿಂಗ್ ಮುಂದುವರಿಸಿದೆ. ಆದರೆ ಚಿತ್ರದ ನಾಯಕ ರಜನಿಕಾಂತ್ ಅಭಿನಯದ ದೃಶ್ಯಗಳನ್ನು ಮಾತ್ರ ಸದ್ಯಕ್ಕೆ ಚಿತ್ರೀಕರಿಸುತ್ತಿಲ್ಲ. ಅದೇನಿದ್ದರೂ ಜನವರಿಗೆ ಎನ್ನಲಾಗಿದೆ. ಈ ಮಧ್ಯೆ ನಯನತಾರಾ ಮತ್ತು ಕೀರ್ತಿ ಸುರೇಶ್ ಅಭಿನಯದ ಇತರ ದೃಶ್ಯಗಳ ಶೂಟಿಂಗ್‌ಗೆ ಸಿದ್ಧತೆ ನಡೆದಿದೆ. ಗಾಯಕ ಎಸ್ಪಿ ಬಾಲಸುಬ್ರಮಣ್ಯಂ ಕೊರೊನಾ ವೈರಸ್‌ನಿಂದಾಗಿ ಸಾವನ್ನಪ್ಪಿದ ಬಳಿಕ ತಮಿಳಿನ ಎಲ್ಲ ಸೂಪರ್‌ಸ್ಟಾರ್‌ಗಳೂ ಶೂಟಿಂಗ್ ಬಗ್ಗೆ ತುಂಬ ಎಚ್ಚರಿಕೆಯ ನಡೆ ಇಡುತ್ತಿದ್ದಾರೆ. ರಜನಿಯಂತೂ ಮನೆ ಬಿಟ್ಟು ಹೊರಗೆ ಬರುತ್ತಿಲ್ಲ ಎನ್ನಲಾಗಿದೆ.

ಕೊರೊನಾ ದಾಳಿಗಿಂತ ಮುಂಚೆ 'ಅಣ್ಣಾತೆ' ಚಿತ್ರದ ಶೂಟಿಂಗ್ ಹೈದರಾಬಾದ್‌ನಲ್ಲಿ ನಡೆಯುತ್ತಿತ್ತು. ಅರ್ಧದಷ್ಟು ಚಿತ್ರೀಕರಣ ಮುಗಿದಿತ್ತು. ಈಗ ಉಳಿದ ಭಾಗಗಳನ್ನು ರಜನಿಯ ಆರೋಗ್ಯದೃಷ್ಟಿಯಿಂದ ಚೆನ್ನೈನಲ್ಲೇ ನಡೆಸಲಾಗುತ್ತಿದೆ. ಈ ದೀಪಾವಳಿಗೆ ತೆರೆ ಕಾಣಬೇಕಿದ್ದ ಚಿತ್ರವು ಇದೀಗ ಮುಂದಿನ ವರ್ಷದ ಪೊಂಗಲ್‌ಗೆ ತೆರೆ ಕಾಣಲು ಯತ್ನಿಸುತ್ತಿದೆ. ಶಿವಾ ನಿರ್ದೇಶನದ ಈ ಚಿತ್ರದಲ್ಲಿ ಹೀರೋಯಿನ್‌ಗಳ ದೊಡ್ಡ ದಂಡೇ ಇದೆ. ನಯನತಾರಾ, ಕೀರ್ತಿ ಸುರೇಶ್ ಅಲ್ಲದೆ ಮೀನಾ, ಖುಷ್ಬೂ ಕೂಡಾ ನಟಿಸಿದ್ದಾರೆ. ವಿಲ್ಲನ್ ಪಾತ್ರಧಾರಿ ಪ್ರಕಾಶ್‌ರಾಜ್.